# ಮೊಸರು, ತುಪ್ಪ, ಪೌಡರ್ ಉತ್ಪಾದನೆಗೆ ಹಾಲು ಇಲ್ಲ

## ಹಾಲು ಉತ್ಪಾದನೆಯಲ್ಲಿ ಭಾರೀ ಇಳಿಕೆ | ಹಾಲಿನ ಉತ್ಪನ್ನಗಳ ತಯಾರಿಕೆಗೆ ಹಾಲಿನ ಕೊರತೆ

• ದೇವೇಶ ಸೂರಗುಪ್ಪ

**ಬೆಂಗಳೂರು:** ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ (ಬಮೂಲ್)ದಲ್ಲಿ ದಿನೇ ದಿನೆ ಹಾಲು ಉತ್ಪಾದನೆಯಲ್ಲಿ ಇಳಿಕೆ ಕಂಡು ಬಂದಿದೆ. ಆ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಚೀಸ್, ತುಪ್ಪ ಪೌಡರ್, ಪನ್ನೀರು ಮತ್ತಿತರರ ಹಾಲಿನ ಉತ್ಪನ್ನಗಳ ತಯಾರಿಕೆಗೆ ಕೊರತೆ ಉಂಟಾಗುವ ಆತಂಕ ಎದುರಾಗಿದೆ.

ಕಳೆದ ವರ್ಷ ಮಾರ್ಚ್‌ನಲ್ಲಿ ನಿತ್ಯ 15 ಲಕ್ಷ ಲೀಟರ್ ಹಾಲು ಪೂರೈಕೆ ಆಗುತ್ತಿತ್ತು. ಆದರೆ ಈ ವರ್ಷ ಈ ಪ್ರಮಾಣ 3 ಲಕ್ಷ ಲೀಟರ್‌ಗೆ ಇಳಿಕೆಯಾಗಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ 11 ರಿಂದ 12 ಲಕ್ಷ ರೂ. ಲೀಟರ್‌ಗೆ ಇಳಿಕೆ ಆಗುವ ಸಾಧ್ಯತೆ ಇದೆ. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಹಾಲು, ಮೊಸರು ಸೇರಿದಂತೆ ಪ್ರತಿದಿನ 12.5 ಲಕ್ಷ ಲೀಟರ್ ಹಾಲಿನ ಬೇಡಿಕೆ ಇದೆ.

ಆದರೆ ಸದ್ಯದ ಪರಿಸ್ಥಿತಿಯಲ್ಲಿ 13 ಲಕ್ಷ ಲೀಟರ್ ಹಾಲು ಪೂರೈಸಲಾಗುತ್ತಿದೆ. ಉಳಿದ ಕೇವಲ 50 ಸಾವಿರ ಲೀಟರ್ ಹಾಲನ್ನು ಚೀಸ್, ತುಪ್ಪ ಹಾಲಿ ಪೌಡರ್ ಮತ್ತಿತರರ ಹಾಲಿನ ಪದಾರ್ಥಗಳಿಗೆ ತಯಾರಿಕೆಗೆ ಬಳಸಲಾಗುತ್ತಿದೆ. ಬೆಂಗಳೂರಿಗೆ ಒಟ್ಟಾರೆ 15 ಲಕ್ಷ ಲೀಟರ್ ಹಾಲಿನ ಬೇಡಿಕೆ ಇದೆ. ಆದರೆ ಅಷ್ಟು ಪ್ರಮಾಣದ ಹಾಲನ್ನು ಉತ್ಪಾದಿಸಲು ಆಗುತ್ತಿಲ್ಲ ಎಂದು ಬಮೂಲ್ ಅಧಿಕಾರಿಗಳು ಮಾಹಿತಿ ನೀಡುತ್ತಾರೆ.

**ನಿತ್ಯ 12.5 ಲಕ್ಷ ಲೀಟರ್ ಹಾಲು ಬೇಡಿಕೆ, ಸದ್ಯ 13 ಲಕ್ಷ ಲೀ.ಪೂರೈಕೆ**



**ಜೂನ್‌ನಲ್ಲಿ 18 ಲಕ್ಷ ಲೀಟರ್:** 2022ರ ಜೂನ್-ಜುಲೈನಲ್ಲಿ ಬಮೂಲ್ 18 ಲಕ್ಷ ಲೀಟರ್ ಹಾಲು ಉತ್ಪಾದಿಸುತ್ತಿತ್ತು. ಡಿಸೆಂಬರ್ ಅಂತ್ಯದ ವೇಳೆಗೆ ಅದು 15 ಲಕ್ಷ ಲೀಟರ್‌ಗೆ ತಲುಪಿತ್ತು. ಕಳೆದ ಜನವರಿಯಲ್ಲಿ 14 ಲಕ್ಷ ಲೀಟರ್ ಹಾಲು ಪೂರೈಕೆ ಆಗಿತ್ತು. ಫೆಬ್ರವರಿ 13 ಲಕ್ಷ ರೂ.ಗೆ ಇಳಿಕೆ ಕಂಡು ಬಂದಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಬೇಸಿಗೆ ಕಾಲ ಪೂರ್ತಿ ಹಾಲಿ ಉತ್ಪಾದನೆಯಲ್ಲಿ ಇಳಿಕೆ ಆಗಬುಹುದು ಎಂದು ಬಮೂಲ್ ಅಧಿಕಾರಿಗಳು ಹೇಳುತ್ತಾರೆ.

ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ ವ್ಯಾಪ್ತಿಯಲ್ಲಿ 1.5 ಲಕ್ಷ ಹಾಲು ಉತ್ಪಾದಕರು ಇದ್ದಾರೆ. ಇದರಲ್ಲಿ ಮಹಿಳೆಯರು ಸೇರಿದ್ದಾರೆ. ರೈತರು ಹೈನುಗಾರಿಕೆಯನ್ನು ತ್ಯಜಿಸುವ ಪ್ರವೃತ್ತಿ ಹೆಚ್ಚಾಗುತ್ತಿರುವುದರಿಂದ ಹಾಲಿನ ಉತ್ಪಾದನೆ ಕಡಿಮೆಯಾಗಲಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಹಾಲಿನ ಪೂರೈಕೆಯಲ್ಲಿ ಕೊರತೆ ಎದುರಾಗುವ ಆತಂಕವಿದೆ ಎನ್ನುತ್ತಾರೆ.

### ಹಾಲು ಉತ್ಪಾದನೆಯಲ್ಲಿ ಇಳಿಕೆ ಏಕೆ?

ಹಸುಗಳ ಆಹಾರ ಪದಾರ್ಥ, ಹಸಿ ಹುಲ್ಲಿನ ದರ ಏರಿಕೆಯಾಗಿದೆ. ಭಾರೀ ಮಳೆ ಹಿನ್ನೆಲೆಯಲ್ಲಿ ಈ ಹಿಂದೆ ರಾಗಿ ಹುಲ್ಲು ನಾಶವಾಗಿದ್ದು ಅದು ಕೂಡ ದೊರೆಯುತ್ತಿಲ್ಲ. ಹೀಗಾಗಿ ರೈತರಿಗೆ ಹಸು ಸಾಕುವುದು ದುಬಾರಿಯಾಗಿದೆ. ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲವು ರೈತರು ಹಸುಗಳನ್ನು ಮಾರಾಟ ಮಾಡುವ ಪರಿಸ್ಥಿತಿ ಉಂಟಾಗಿದೆ ಎಂದು ಬಮೂಲ್ ಅಧ್ಯಕ್ಷ ನರಸಿಂಹ ಮೂರ್ತಿ ಹೇಳುತ್ತಾರೆ. ನೆರೆಯ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದ ರೈತರಿಗೆ ಕಡಿಮೆ ಬೆಲೆ ಪಾವತಿಸಲಾಗುತ್ತಿದೆ. ಆಂಧ್ರಪ್ರದೇಶ, ತಮಿಳುನಾಡು ಸೇರಿದಂತೆ ನೆರೆ ರಾಜ್ಯಗಳು ರೈತರಿಗೆ 40 ರೂ.ಗಳನ್ನು ರೈತರಿಗೆ ನೀಡುತ್ತಿವೆ. ಆದರೆ, ರಾಜ್ಯ ಸರ್ಕಾರ 30 ರೂ. ಪಾವತಿಸುತ್ತಿದೆ. ಇದು ರೈತರ ವೆಚ್ಚವನ್ನು ಭರಿಸುವುದಿಲ್ಲ. ಹೀಗಾಗಿ ಪ್ರತಿ ತಿಂಗಳು 15-20 ರೈತರು ನಮಗೆ ಹಾಲು ಮಾರಾಟ ಮಾಡುವುದನ್ನು ನಿಲ್ಲಿಸುತ್ತಿದ್ದಾರೆ ಎಂದು ತಿಳಿಸುತ್ತಾರೆ.

**ಹೆಚ್ಚುತ್ತಿರುವ ಪಶು ಆಹಾರದ ಬೆಲೆ ನಿಭಾಯಿಸಲು ಸಾಧ್ಯವಾಗದೆ ಅನೇಕ ರೈತರು ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಮಹಾರಾಷ್ಟ್ರದ ತಮ್ಮ ಸಹವರ್ತಿಗಳಿಗೆ ಜಾನುವಾರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಬಮೂಲ್‌ನಲ್ಲಿ ಹಾಲು ಉತ್ಪಾದನೆ ಕಡಿಮೆ ಆಗಿದೆ. ಮಳೆಗಾಲದವರೆಗೂ ಇದೇ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ.**

• ನರಸಿಂಹಮೂರ್ತಿ, ಬಮೂಲ್ ಅಧ್ಯಕ್ಷ

08-03-2023
Udayavani Pg 05

# Hailstorm, unseasonal rain damage crops in three States

Chief Ministers of Maharashtra, Gujarat and Madhya Pradesh order surveys to estimate damage to standing crops in the affected districts; Opposition leaders demand immediate relief to farmers

**The Hindu Bureau**
PUNE/AHMEDABAD



**Hopes crash:** A farmer looks at his damaged wheat crops after a hailstorm in Barkheda Nathu village of Bhopal district in Madhya Pradesh on Tuesday. A.M. FARUQUI

Hailstorms flattened crops in north Maharashtra region on Tuesday, while unseasonal rain delivered a blow to wheat farmers in Madhya Pradesh. In Gujarat, rain in over 100 talukas have damaged the standing rabi crops.

The wheat, onion and mango crops have been affected, said a Nashik division official, on the impact of the adverse weather in Maharashtra. "The onion crop which was ready for harvest has become wet. More than 1,800 hectares of wheat and onion plantations in Nashik is likely to be affected," the official said.

Dhule and the Vidarbha region were affected as well.

Maharashtra Chief Minister Eknath Shinde has ordered an assessment of the crop damage in the districts affected. Leader of the Opposition in the State and Nationalist Congress Party leader Ajit Pawar on Tuesday said that immediate relief should be provided to the farmers.

In Gujarat, the rain has led to a crisis for farmers in over a dozen rural districts. Amid reports of extensive damage to the standing crops, the State government on Tuesday ordered a survey of crop losses due to unseasonal rains in the affected districts.

The rain at the time of harvest has damaged a number of crops in Saurashtra and north and central Gujarat districts.

In the past few days, heavy rain was reported in parts of Rajkot, Amreli and Bhavnagar districts. Rain accompanied by strong winds and thunderstorms lashed Rajkot city, parts of Dhari, Savarkundla, Damnagar, and Lathi taluks of Amreli district, worrying mango growers.

"There is a forecast for unseasonal rains for the next two days and so we will get a final report on crop loss from the districts after that," Gujarat Agriculture Minister Raghavji Patel said in the State Assembly.

Meanwhile, in a farm-related development, the Gujarat government announced a ₹330-crore special package for onion and potato growers, as the prices of red onion and potato have crashed recently due to a glut in the market.

In Madhya Pradesh, Chief Minister Shivraj Singh has ordered a survey of the losses for farmers. The wheat crop in Bhopal, Sehore, Raisen, Vidisha and a few other districts were flattened by the strong wind and hailstorms.

*(With PTI inputs)*

08-03-2023
Hindu Pg 16

## ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಕುಲಸಚಿವರ ಕಾರ್ಯಾಲಯ, ಕೃಷಿನಗರ, ಧಾರವಾಡ-5,

ಸಂಖ್ಯೆ: R/Rectt/Advt.61/2023 ದಿನಾಂಕ: 07.03.2023

### ಅಧಿಸೂಚನೆ

ವಿಷಯ: ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕಾತಿ ಕುರಿತು.

ಉಲ್ಲೇಖ: ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ: R/Rectt/Advt.61/2023 ದಿನಾಂಕ 03.03.2023

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ಬ್ಯಾಕ್‌ಲಾಗ್ ಹುದ್ದೆಗಳನ್ನು ಉಲ್ಲೇಖಿತ ಅಧಿಸೂಚನೆ ಮೂಲಕ ನೇಮಕಾತಿಗಾಗಿ ಜಾಹೀರುಪಡಿಸಲಾಗಿದೆ. ಸದರಿ ಅಧಿಸೂಚನೆ ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯು ವಿವಿಯ ಅಧಿಕೃತ ಜಾಲತಾಣದಲ್ಲಿ (www.uasd.edu) ಲಭ್ಯವಿದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ವಿವಿಯ ಜಾಲತಾಣವನ್ನು ವೀಕ್ಷಿಸಬಹುದು.

ಸಹಿ/-
ಕುಲಸಚಿವರು

ವಾಸಾಇ/ಧಾ/1218/2022-23/ದೇಶಪಾಂಡೆಪಬ್ಲಿಸಿಟಿ

08-03-2023
Prajavani Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in



# CM releases vision docu to make K'taka $1 tn economy

EXPRESS NEWS SERVICE
@ Bengaluru

CHIEF Minister Basavaraj Bommai on Tuesday released a vision document to make Karnataka a $1 trillion economy.

He said that in the pursuit of building "Nava Karnataka for Nava Bharat", a committee was constituted by the government. It recommended increasing the growth rate of the agriculture sector from 13.3% to 16.3%, industry from 8.8% to 16.8% and service sector from 14.7% to 16.9% for the overall growth rate at 16.8% by 2032.

A large number of recommendations of the committees has already been announced during this year's budget, the CM said.

"We propose to make the district a fulcrum of growth and development by strengthening capacity building, infrastructure support and delegation of powers to field level functionaries," the CM stated.

The report recommends liberalising the conversion of land for agro-processing industries to ease capital availability via bank loans, accelerated rollout of the agri startup policy to foster industry partnerships, provide early-stage funding, develop incubation infrastructure and provide state support like incentives and concessions, promote growing of sandalwood as intercrop with horticulture crops and develop and rollout inland fisheries policy.

The report stated that per capita income has the potential to go up from Rs 3.05 lakh to Rs 12.96 lakh in 2032.

08-03-2023
Ind Exp Pg 13